doc-387
T.P-2

(1)

Reg ಠ G No.155 9 - 10 - 1968

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ದಕ್ಷಿಣದಲ್ಲಿ ಪಾರ್ಲಿಮೆಂಟು ಅಧಿವೇಶನ ನಡೆಸಲು ವಿರೋಧ

ಓರಿಯಂಟಲ್ ಡ್ರಾನ್ಸ್

ಮೈಸೂರು ದಸರಾ ವಸ್ತುಪ್ರದರ್ಶನ ನಡೆಯುತ್ತಿರುವ
ಜೀವಣರಾಯನ ಕಟ್ಟೆಯಲ್ಲಿ
ಚಿತ್ರತಾರೆಗಳಿಂದ ಅಮೋಘ ನರ್ತನಗಳು
ತಪ್ಪದೇ ನೋಡಿ ಆನಂದಿಸಿರಿ
ಪ್ರವೇಶಧನ : ರೂ. 1 ಮತ್ತು 50 ಪೈಸೆ

ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಕಿನ್ಯಾ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೇಸಿನವರು, ಪದ್ಮಭೂಷಣ ಸೇತ್ರದಾನಿ ಡಾ|| ಎಂ.ಸಿ ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದಷ್ಟು ವಿಳಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಶ್ರೀ ಶಂಕರ ಕೃಪ

ಶೃಂಗೇರಿಯ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಆಶೀರ್ವಾದಗಳೊಡನೆ ಕಳೆದ 3 ವರ್ಷಗಳಿಂದ ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದು, ಈಗ 4 ನೇ ವರ್ಷದ ಮೊದಲನೆಯ ಸಂಚಿಕೆ –ಆಶ್ವಯುಜ ಮಾಸದ್ದು ಮೈಸೂರಿನಿಂದ ಪ್ರಕಟವಾದ ಸಂದರ್ಭದಲ್ಲಿ ಅದರ ಸಂಪಾದಕರಾದ ಶ್ರೀ ವಿಶ್ವೇಶ್ವರ ದೀಕ್ಷಿತರು ನಿನ್ನೆ ಶಂಕರ ನಿಲಯದಲ್ಲಿ ಪತ್ರಿಕೆಯವರೊಡನೆ ಮಾತನಾಡುತ್ತಾ, ಈ ಮಾಸಪತ್ರಿಕೆ ಧರ್ಮ ಮತ್ತು ಶಂಕರ ಸಿದ್ಧಾಂತ ಪ್ರಚಾರ ಮಾಡುವುದು ಎಂದು ತಿಳಿಸಿದರು.

ಶಂಕರ ನಿಲಯ ಬಡಾವಣೆ ಮಾಡುವುದಾಗಿ ಶ್ರೀ ಪಿ. ಆರ್. ಹರಿಹರನ್ ತಿಳಿಸಿದರು.

★

ಪ್ರತಿಭಾ ಪ್ರದರ್ಶನ

ಮಾನಸ ಗಂಗೋತ್ರಿಯ ಕನ್ನಡ ಸಂಘದಾಶ್ರಯದಲ್ಲಿ ಮಾನಸ ಗಂಗೋತ್ರಿಯ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಪ್ರತಿಭಾ ಪ್ರದರ್ಶನ ನಡೆಯಿತು. ಸಂಘದ ಅಧ್ಯಕ್ಷರಾದ ಡಾ|| ಎಂ ಆರ್. ರಾಜಶೇಖರಕೆಟ್ಟಯನವರು ಅಧ್ಯಕ್ಷತೆ ವಹಿಸಿದ್ದರು.

ದಕ್ಷಿಣದಲ್ಲಿ ಪಾರ್ಲಿಮೆಂಟು

ನವಡೆಹಲಿ— ದಕ್ಷಿಣದಲ್ಲಿ ಪಾರ್ಲಿಮೆಂಟು ಅಧಿವೇಶನ ನಡೆಸುವ ವಿಷಯದಲ್ಲಿ ಅನೇಕ ಮುಖ್ಯಮಂತ್ರಿಗಳ ವಿರೋಧವಿದೆ – ಶ್ರಿವೇಂಡ್ರಂನಲ್ಲಿ ನಡೆಸಲು ರೂ. 15 ಕೋಟಿಯ ಕಟ್ಟಡ ಕಟ್ಟುವ ಬಗ್ಗೆ ಒಂದು ನಿಪುಣ ಸಮಿತಿ ನೇಮಿಸಲು ಕೇರಳ ಸರ್ಕಾರದ ಅಭಿಪ್ರಾಯವಾಗಿದೆ. – ಬೆಂಗಳೂರಿನಲ್ಲಿ ಆದರೂ, ಮಂತ್ರಿಗಳೂ, ಪಾರ್ಲಿಮೆಂಟು ಸದಸ್ಯರೂ, ಕೇಂದ್ರ ಸರ್ಕಾರದ ನೌಕರರು 2000 ಜನರಿಗೆ ವಸತಿ ಸೌಕರ್ಯದ ಅವಶ್ಯವಿದೆ – ಈ ಬಗ್ಗೆ 7–8 ಕೋಟಿ ರೂ. ಗಳ ಖಾಯಂ ಕಟ್ಟಡವಾಗುವನರಿಗೆ, ರಾಜ್ಯದ ಮಂತ್ರಿಗಳ ಜೆಲಕೆ ಮತ್ತು ಹೋಟಲುಗಳಲ್ಲಿ ಇಳಿದುಕೊಳ್ಳಲು ಮೈಸೂರು ಸರಕಾರದ ಸಲಹೆ : ಹೋಟಲು ಚಾರ್ಜು ದಿನಕ್ಕೆ ರೂ. 55 ರಿಂದ 110 ರವರೆಗೆ ಆಗುವುದೆನ್ನಲಾಗಿದೆ – ಈ ಮಧ್ಯೆ ಬೆಂಗಳೂರು ನಾಗರೀಕ ಸಮಿತಿ ಅರ್ಪಿಸಿರುವ ಮನನಯಲ್ಲಿ, ಈಗಾಗಲೇ ಜೀವನ ಖರ್ಚು ಹೆಚ್ಚಾಗಿದ್ದು, ಅಧಿವೇಶನ ನಡೆಸುವದರಿಂದ ಉತ್ಕಟತೆಗೆ ಬರುವುದೆಂದು ತಿಳಿಸಿ ವಿರೋಧಿಸಲಾಗಿದೆ.

●

ಆಡಂಬರದ ಮೆರವಣಿಗೆ

ಬಳ್ಳಾರಿ— ಗಾಂಧಿ ಶತಮಾನೋತ್ಸವ ಸಂಬಂಧದಲ್ಲಿ ಗಾಂಧೀಜೀ ಭಾವಚಿತ್ರವನ್ನು, 101 ಜೊತೆ ಎತ್ತುಗಳನ್ನು ಕಟ್ಟಿದ್ದ ಹೂವಿನಿಂದ ಶೃಂಗರಿಸಲ್ಪಟ್ಟಿದ್ದ ರಥದ ಮೇಲಿಟ್ಟು ಮೆರವಣಿಗೆ ಮಾಡಲಾಯಿತು.

●

ಸಿಂಧ್ ಬಿಟ್ಟು ಹೋಗಿ

ಬೊಂಬಾಯಿ— 1969 ರ ಆಗಸ್ಟ್ 14 ರೊಳಗೆ ಸಿಂಧ್ ಪ್ರಾಂತ್ಯವನ್ನು ಬಿಟ್ಟು ಹೋಗಬೇಕೆಂದು ಪಾಕಿಸ್ಥಾನಕ್ಕೂ ಮತ್ತು ಅಧ್ಯಕ್ಷ ಅಯೂಬರಿಗೂ ಅ ಜಾ ದ್ ಸಿಂಧ್ ಸಮಿತಿ ಕಟ್ಟಕಡೆ ತಿಳುವಳಿಕೆ ಕೊಟ್ಟಿದೆ.

ಕರ್ನಾಟಕ

ಹುಬ್ಬಳ್ಳಿ— ಕನ್ನಡ ದೇವತೆ ಭುವನೇಶ್ವರಿಯ ಕೃಪೆಯಿಂದ ರಾಜ್ಯದ ಹೆಸರನ್ನು ಬದಲಾಯಿಸುವ ಕಾಲ ಬಂದಿದೆಯೆಂದೂ, ಬೇಗನೇ 'ಕರ್ನಾಟಕ" ವೆಂದು ಹೆಸರಿಡಲಾಗುವುದೆಂದೂ ಮಂತ್ರಿ ಶ್ರೀ ದೊಡ್ಡಮೇಟಿಯವರು ತಮ್ಮ ಸ್ವಸ್ಥಳವಾದ ಜಕ್ಕಳ್ಳಿಯಲ್ಲಿ ನಾಡು ಹಬ್ಬ ಸಮಾರಂಭದಲ್ಲಿ ಹೇಳಿದರು — ಶ್ರೀ ಭುವನೇಶ್ವರಿ ದೇವತೆಯ ದೊಡ್ಡ ಪಟವನ್ನು ಆನೆಯ ಮೇಲಿಟ್ಟು ಗ್ರಾಮದಲ್ಲಿ ಮೆರವಣಿಗೆ ಮಾಡಲಾಯ್ತು.

★

ಖೈದಿಗಳ ಬಿಡುಗಡೆ

ಮದರಾಸು— ಗಾಂಧಿ ಶತಮಾನೋತ್ಸವ ವರ್ಷದ ಸಮಾರಂಭ ಸಂದರ್ಭದಲ್ಲಿ ಮದರಾಸು ಸರಕಾರವು 4000 ಖೈದಿಗಳನ್ನು ಬಿಡುಗಡೆ ಮಾಡಿತು – ರಾಜ್ಯದಲ್ಲಿ 15000 ಖೈದಿಗಳಿರುವರು – ಕೆಲವರಿಗೆ ಶಿಕ್ಷೆ ಅವಧಿ ತಗ್ಗಿಸಲಾಗುವುದು.

★

ಕೇಂದ್ರದ ಔದಾರ್ಯ

ಬೆಂಗಳೂರು— ಮೈಸೂರು-ಸರಕಾರವು ಹೆಚ್ಚು ಹಾಲು ಕೊಡುವ ದನಗಳ ಅಭಿವೃದ್ಧಿಗೊಳಿಸುತ್ತಿರುವುದಕ್ಕೆ ಸಂತೋಷಗೊಂಡು, ಕೇಂದ್ರವು ರಾಜ್ಯಕ್ಕೆ 93 ಮುರಾಬ್ ಎಮ್ಮೆಗಳನ್ನು ಉದಾರದಾನ ಮಾಡಿದೆ.

★

ಅತಿಪ್ರಸಂಗ

ಕೊಲಂಬೊ— ಕುರಾನಿನ 1400 ನೇ ಜನ್ಮದಿನೋತ್ಸವ ಸಂದರ್ಭದಲ್ಲಿ ಸಿಲೋನಿಗೆ ಹೋದ ಪಾಕಿಸ್ಥಾನ ವಿದೇಶಾಂಗ ಮಂತ್ರಿ ಜಫೀರರು, ಭಾರತ–ಸಿಲೋನು ಮಧ್ಯೆ ಇದ್ದ ಸ್ವಾಮಿತ್ವವು ತಕರಾರಿನಲ್ಲಿರುವ ಕಚಿಟೀವೋ ಸಣ್ಣ ದ್ವೀಪವು ಸಿಲೋನಿನ ಒಂದು ಭಾಗವೆಂದು ಘೋಷಿಸಿರುವುದನ್ನು ಭಾರತ ಅಲ್ಲಗಳೆದಿದೆ.

ಹಿಂದೂಗಳ ಆಚಾರ

ಸಂಗ್ರಾಹಕರು— "ಶಾಸ್ತ್ರಧರ್ಮನಿರತ" ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಆಯಸ್ಸು ಮತ್ತು ವರ್ಚಸ್ಸು ವೃದ್ಧಿಯಾಗಲೂ ಮತ್ತು ವ್ಯವಹಾರಕ್ಕೆ ಅನುಕೂಲವಾಗಲೂ ಮಗುವಿಗ ನಾಮಕರಣ ಮಾಡಬೇಕು. ಎಲ್ಲ ವರ್ಣದವರೂ ಚೌಲ ಕರ್ಮವನ್ನು ನಡೆಸಬೇಕು. ಶುಭ ದಿವಸಗಳಲ್ಲಿ ಶಾಸ್ತ್ರವಿಧಿಗನುಸಾರವಾಗಿ ಚೌಲವನ್ನು ಮಾಡಿದರೆ ಆಯಸ್ಸು ವೃದ್ಧಿಯಾಗುತ್ತದೆ. ಅಶುಭ ದಿವಸಗಳಲ್ಲಿ, ಶಾಸ್ತ್ರಕ್ಕೆ ವಿರೋಧವಾದ ರೀತಿಯಲ್ಲಿ ಚೌಲವನ್ನು ಮಾಡಿದರೆ ಆಯಸ್ಸು ಕ್ಷೀಣವಾಗುತ್ತದೆ. ಆದುದರಿಂದ ಸೆನ್ಸ್ ಪ್ರಯತ್ನದಿಂದಲೂ ಶಾಸ್ತ್ರವಿಧಿಗನುಸಾರವಾಗಿ ಚೌಲಕರ್ಮವನ್ನು ನಡೆಸಬೇಕು.

★

ಬೆಂಗಳೂರು— ನಂಜನಗೂಡು ತಾಲ್ಲೂಕು ಪೋಪಿಗೆರೆಯಲ್ಲಿ ಒಂದು ಆಯುರ್ವೇದ ಆಸ್ಪತ್ರೆ ಸ್ಥಾಪನೆಯನ್ನು ಸರ್ಕಾರ ಮಂಜೂರ್ಮಾಡಿದೆ.

ಪಶ್ಚಿಮ ಜರ್ಮನಿಯ ರೈಲ್ವೇ ವಿಭಾಗವೊಂದರಲ್ಲಿ ಕೆಲವು ಮಾರ್ಗಗಳಲ್ಲಿ ಹೋಗುವ ರೈಲ್ಲು ಬಂಡ್ಡಿಗಳಲ್ಲಿ ಚಿತ್ರ ಪ್ರದರ್ಶನಕ್ಕೆ ಬೇಕಾದ ಸೌಕರ್ಯಗಳನ್ನು ಅಳವಡಿಸಿ ವಿದೇಶೀ ಚಿತ್ರಗಳನ್ನು ಪ್ರದರ್ಶಿಸುತ್ತಾರೆ.

ಮಧುರೈ— ಸಿಂಗಪುರದಿಂದ ಮದರಾಸು ರೇವಿಗೆ ತಾ|| 9 ರಂದು ಬಂದ ಕುರಿ ತುಂಬಿದ ಹಡಗಿನಿಂದ ಇನ್ಫ್ಲ್ಯುಯಂಜಾ ಖಾಯಿಲೆ ಬಂದಿತೆಂದು ಇಲ್ಲಾ ಖಾ ವೈದ್ಯರ ಅಭಿಪ್ರಾಯವಾಗಿದೆ.

ವುಡ್‌ಲಾಂಡ್ಸ್ ಜನಭರಿತ 4ನೇ ವಾರ
ವೈಭವ ಆರಂಭ
— ಮನಮೋಹಕ ಹಿಂದಿ ಚಿತ್ರ —
ನೀಲ್ ಕಮಲ್ ★ Neel Kamal
ಈಸ್ಟ್‌ಮನ್ ಕಲರ್
.... ಮಿಲಿಯಗಟ್ಲೆ ತೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....
ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್
ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರಿಯ 6 ನೇ ವಾರ
ಚಿತ್ರಾಕರ್ಷ ಹಿಂದಿ ಚಿತ್ರ
ಬ್ರಹ್ಮಚಾರಿ
ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ
ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Printing — Neat Binding
Lakshminarasimha Press
Sivarampet, Mysore

ಆಶೋಕ ಏಜೆನ್ಸೀಸ್
ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು
ಎಲ್ಲ ವಿಧ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

SHAKTI
SUDHA
A Superb Tonic

Protect the Cow



ಗೋರಕ್ಷಣೆ ಮತ್ತು ಪಾಣಿದಯಾ ಕಾರ್ಯಗಳು ಹೆಚ್ಚಿ ಜಾಸ್ತಿಗಿ ನಡೆಯಲಿ

Cow Slaughter should be banned Immediately

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F.K. Irani, Sri M.B. Basaviah, Sri Madhav Shenoi, Sri Opera Talkies, Padmabhushana Dr. M.C. Modi, Dr. R.S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4